



ನಸುಕಿನಲ್ಲಿ ಚಾರಣಿಗರು



ಕರಿಘಟ್ಟದ ತುತ್ತ ತುದಿ ತಲುಪಿದ ಸಂಭ್ರಮದಲ್ಲಿ ಚಾರಣಿಗರು

ವನ್ಯಧಾಮ: ಕೆ.ಶೆಟ್ಟಹಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿರುವ ಕರಿಘಟ್ಟದ ಕಾಡಿನಲ್ಲಿ ಕಪೋತ, ಬುಲ್‌ಬುಲ್, ಕುಂಡಕ್ಕಿ, ಕೆಂಬೂತ, ಗೌಜಲ, ನವಿಲು ಮತ್ತಿತರ ಪಕ್ಷಿಗಳಿವೆ. ಕಾಡಿನ ನಡುವೆ ಸಾಗಿದಂತೆ ಹಕ್ಕಿಗಳ ಕಲರವ ಮುದ ನೀಡುತ್ತದೆ. ಮೊಲ, ಉಡ, ಹಂದಿ, ಓತಿಕ್ಯಾತಗಳ ಜತೆಗೆ ಆಗಾಗ ಚಿರತೆಗಳೂ ಇಲ್ಲಿ ಕಾಣಿಸಿಕೊಳ್ಳುತ್ತವೆ. ಆಲ, ಅರಳಿ, ಬೇವು, ಹೊಂಗೆ, ಹುಣಸೆ, ಮಾವು, ಹಿಪ್ಪೆ ಇತರ ಮರಗಳನ್ನು ನೆಟ್ಟು ಬೆಳೆಸುವ ಪ್ರಯತ್ನ ಕಳೆದ ಮೂರು ವರ್ಷಗಳಿಂದ ನಡೆಯುತ್ತಿದೆ.

ಹೋಗುವ ದಾರಿ: ಕರಿಘಟ್ಟ ಪ್ರಕೃತಿ ತಾಣ ತಾಲ್ಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ 4 ಕಿ.ಮೀ, ಜಿಲ್ಲಾ ಕೇಂದ್ರ ಮಂಡ್ಯದಿಂದ 25 ಕಿ.ಮೀ. ಹಾಗೂ ಮೈಸೂರಿನಿಂದ 22 ಕಿ.ಮೀ. ದೂರದಲ್ಲಿದೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಲೋಕಪಾವನಿ ನದಿ ಸೇತುವೆ ಬಳಿ ತಿರುವು ಪಡೆದರೆ ಕರಿಘಟ್ಟ ಸಿಗುತ್ತದೆ.